( ದಿ:05/03/2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು )

ಪಿ.ಡಬ್ಲ್ಯೂ.1 ರವರ ಪಾಟೀ ಸವಾಲು:- ಶ್ರೀ.ಹೆಚ್.ಪಿ.ಎಸ್.ವಕೀಲರಿಂದ

ದಾವೆಯಲ್ಲಿ ಆಸ್ತಿಯಲ್ಲಿ ಹಿಸ್ಸೆ ಕೋರಿ ಹಾಕಿರುತ್ತೇವೆ. ಯಾವ-ಯಾವ ಆಸ್ತಿಯಲ್ಲಿ ಹಿಸ್ಸೆ ಕೋರಿರುತ್ತೇವೆ ಎಂದು ಗೊತ್ತಿಲ್ಲ. ನನ್ನ ತಂದೆ ಹೆಸರು ಸಿದ್ದಯ್ಯ. ನಮ್ಮ ತಂದೆ ತೀರಿ ಹೋಗಿ 40 ವರ್ಷ ಆಯಿತು. ನನ್ನ ತಂದೆಗೆ ಗಂಗಮ್ಮ ಮೊದಲನೇ ಹೆಂಡತಿ, ಚನ್ನಮ್ಮ ಎರಡನೇ ಹೆಂಡತಿ. ಅವರಿಬ್ಬರು ಮೃತಪಟ್ಟಿರುತ್ತಾರೆ. ಮೊದಲನೇ ಹೆಂಡತಿ ಇದ್ದಾಗಲೇ ನಮ್ಮ ತಾಯಿಯನ್ನು ವಿವಾಹವಾಗಿದ್ದರು ಎಂದರೆ ಸುಳ್ಳು. ಅವರು ಎಷ್ಟು ವರ್ಷದ ಹಿಂದೆ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಅವರು ಮೃತಪಟ್ಟ ನಂತರ ನಮ್ಮ ತಾಯಿಯನ್ನು ವಿವಾಹವಾದರು. ಗಂಗಮ್ಮನಿಗೆ ಗುಂಡಶೆಟ್ಟಿ ನಂಜಪ್ಪಶೆಟ್ಟಿ ರವರು ಇಬ್ಬರು ಮಕ್ಕಳು. ನಮ್ಮ ತಂದೆಯೊಂದಿಗೆ ಗುಂಡಶೆಟ್ಟಿ ನಂಜಪ್ಪಶೆಟ್ಟಿ ಒಟ್ಟಿಗೆ ವಾಸವಿರಲಿಲ್ಲ ಎಂದರೆ ಸುಳ್ಳು. ನಮ್ಮ ತಂದೆಗೆ ಕೊಣನೂರು ಗ್ರಾಮದಲ್ಲಿ ಒಟ್ಟು ಎರಡು ಮನೆಗಳು ಇದ್ದವು. ನನ್ನ ಮದುವೆಯಾಗಿ 45 ವರ್ಷ ಆಗಿದೆ. ನನ್ನ ಮದುವೆ ಸಂದರ್ಭದಲ್ಲಿಯೂ ಸಹ ಗುಂಡಪ್ಪಶೆಟ್ಟಿ ಮತ್ತು ನಂಜಪ್ಪ ನನ್ನ ತಂದೆಯ ಜೊತೆಗೆ ಒಟ್ಟಿಗೆ ಇರಲಿಲ್ಲ ಎಂದರೆ ಸುಳ್ಳು. 40 ವರ್ಷಗಳಿಂದ ಅವರು ಬೇರೆ-ಬೇರೆ ಇರುತ್ತಾರೆ.

2. ನಮ್ಮ ತಂದೆ ಬದುಕಿದ್ದಾಗಲೇ ದಿ:18/04/1976 ರಲ್ಲಿ ಪಾಲುಪರಿಕತ್ತು ಮಾಡಿಕೊಟ್ಟಿದ್ದರು ಎಂದರೆ ಸುಳ್ಳು. ನಮ್ಮ ತಾಯಿ ಮೃತಪಟ್ಟು ಒಂದು ವರ್ಷ ಆಯಿತು. ನಮ್ಮ ತಾಯಿ ಅಲ್ಲೇ ಇದ್ದರು ಯಾರ ಜೊತೆ ಇದ್ದರು ಎಂದು ನನಗೆ ಗೊತ್ತಿಲ್ಲ. ನಂಜಪ್ಪಶೆಟ್ಟರು ಅವರ ಮಕ್ಕಳು ಬೇರೆ ವಾಸವಿರುತ್ತಾರೆ ಎಂದರೆ ಸರಿ. ಗುಂಡಪ್ಪಶೆಟ್ಟಿ ಅವರ ಮಕ್ಕಳು ಬೇರೆ ವಾಸವಿರುತ್ತಾರೆ ಎಂದರೆ ಸರಿ. ನನ್ನ ತಮ್ಮ ನಂಜಪ್ಪನೂ ಕೂಡ ಬೇರೆ ಮನೆಯಲ್ಲಿ ವಾಸ ಎಂದರೆ ಸರಿ. ರಾಮಚಂದ್ರ ನನ್ನ ಜೊತೆ ಚೆನ್ನಾಗಿದ್ದಾರೆ ಎಂದರೆ ಎಲ್ಲರೂ ಚೆನ್ನಾಗಿರುತ್ತಾರೆ. ರಾಮಚಂದ್ರ ನನ್ನ ಸ್ವಂತ ತಮ್ಮ. ಈ ದಾವೆಯಲ್ಲಿ ಪ್ರತಿವಾದಿ 8 ಮತ್ತು ಪ್ರತಿವಾದಿ 2 ರಿಂದ 7 ರವರು ವಾಸವಿರುವ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ವಿದ್ಯಾಭ್ಯಾಸ ಇಲ್ಲ ಆಗಾಗಿ ಸೇರಬೇಕು ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯ ಚೆಕ್ಕುಬಂದಿಯನ್ನು ಬೇರೆಯವರಿಂದ ಹೇಳಿಸಿಕೊಂಡು ಬರೆಸಿರುತ್ತೇನೆ. ದಾವಾ ಷೆಡ್ಯೂಲ್ 5 ನೇ ಆಸ್ತಿಯ ಪಶ್ಚಿಮ:- ರಾಮಚಂದ್ರನ ಮನೆ ಎಂದರೆ ನನ್ನ ತಮ್ಮನ ಮನೆ. ಉತ್ತರಕ್ಕೆ:- ನಾಗರಾಜರವರ ಮನೆ ಮತ್ತು ಖಾಲಿ ನಿವೇಶನ ಎಂದರೆ ನಂಜಪ್ಪಶೆಟ್ಟಿರವರ ಮಗ ಎಂದರೆ ಸರಿಯಲ್ಲ. ನಂಜಪ್ಪಶೆಟ್ಟಿ ಮನೆಯೂ ಸಹ ಹಳೆ ಮನೆ ಇದೆ.

3. ದಿ:18/04/1976 ರಲ್ಲಿ ನಮ್ಮ ತಂದೆ ಆಸ್ತಿಗಳನ್ನು 4 ಭಾಗ ಮಾಡಿ ನಂಜಪ್ಪಶೆಟ್ಟಿ ಗುಂಡಪ್ಪಶೆಟ್ಟಿ ರಾಮಚಂದ್ರ ಹಾಗೂ ಸಿದ್ದಯ್ಯ ನಮ್ಮ ತಂದೆಗೆ ಒಂದು ಭಾಗ ಮಾಡಿಕೊಟ್ಟರು ಎಂದರೆ ಸರಿಯಲ್ಲ. ನಮ್ಮ ತಂದೆ ದಾವಾ ಷೆಡ್ಯೂಲ್ 3 ನೇ ಆಸ್ತಿಯನ್ನು ತಮ್ಮ ಹಿಸ್ಸೆಗೆ ಇಟ್ಟುಕೊಂಡಿದ್ದರು ಎಂದರೆ ಯಾರಿಗೂ ಹಿಸ್ಸೆ ಮಾಡಿಕೊಟ್ಟಿರಲಿಲ್ಲ, ಆದರೆ ತಮ್ಮ ಜೀವನಾಂಶಕ್ಕೆ ಇಟ್ಟುಕೊಂಡಿದ್ದರು. ಕೊಣನೂರು ಪಂಚಾಯಿತಿ 865 ರ ಅಸೆಸ್ ಮೆಂಟ್ ನಂ:846 ರ ಆಸ್ತಿ ನಮ್ಮ ತಂದೆಯ ಹಿಸ್ಸೆಗೆ ಬಂದಿತ್ತು ಎಂದರೆ ಸುಳ್ಳು. ಈ ಆಸ್ತಿ ನಮ್ಮ ತಂದೆಯ ಹೆಸರಿಗೆ ಇತ್ತು ಎಂದರೆ ಸರಿ. ಗುಂಡಶೆಟ್ಟಿಗೆ ದಾವಾ ಷೆಡ್ಯೂಲ್ ಐಟಂ ನಂ:1 ರ ಆಸ್ತಿಯಲ್ಲಿ 26 ವರೆ ಗುಂಟೆ, ಅದೇ ರೀತಿ ಉಳಿದ 26 ವರೆ ಗುಂಟೆ 8 ನೇ ಪ್ರತಿವಾದಿಗೆ ಬಂತು ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಂ ನಂ:2 ರ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ 1 ಎಕರೆ 5 ಗುಂಟೆ, ನಂಜಪ್ಪಶೆಟ್ಟಿ 1 ಎಕರೆ 31 ಗುಂಟೆ, 8 ನೇ ಪ್ರತಿವಾದಿಗೆ 1 ಎಕರೆ 5 ಗುಂಟೆ ಆಸ್ತಿ ಬಂತು ಎಂದರೆ ಅವರು ಏನು ಮಾಡಿಕೊಂಡಿದ್ದಾರೋ ನಮಗೆ ಗೊತ್ತಿಲ್ಲ. ದಾವಾ ಆಸ್ತಿ 1 ಮತ್ತು

2 ರಿಂದ 1 ನೇ ಪ್ರತಿವಾದಿ, 8 ನೇ ಪ್ರತಿವಾದಿ ಹಾಗೂ ನಂಜಪ್ಪಶೆಟ್ಟಿಯವರಿಗೆ ತಲಾ 1 ಎಕರೆ 31 ಗುಂಟೆ ಆಸ್ತಿ ಬಂತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮೃತಪಟ್ಟ ನಂತರ ದಾವಾ ಷೆಡ್ಯೂಲ್ 3 ರ ಆಸ್ತಿಯನ್ನು ಮೇಲೆ ಹೇಳಿದ ಮೂರು ಜನ ಗಂಡು ಮಕ್ಕಳು ತಲಾ 16 ಗುಂಟೆಯಂತೆ ಭಾಗ ಮಾಡಿಕೊಂಡರು ಎಂದರೆ ಸುಳ್ಳು. ಈ ಮೇಲೆ ಹೇಳಿದಂತೆ ಅವರು ಅನುಭವಿಸುತ್ತಾರೆ ಎಂದರೆ ಹಂಚಿಕೊಟ್ಟಿಲ್ಲ ಅನುಭವಿಸಿಕೊಂಡು ಬರುತ್ತಿರುತ್ತಾರೆ. ನಮ್ಮ ತಂದೆಗೆ ಮೇಲೆ ಹೇಳಿದಂತೆ ಬಂದ ಮನೆಯನ್ನು 8 ನೇ ಪ್ರತಿವಾದಿ ಉಳಿಸಿಕೊಂಡರು ಎಂದರೆ ಸುಳ್ಳು. ಅವರ ಹೆಸರಿಗೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

4. ಮಲ್ಲಿಗಮ್ಮ ಎಂದರೆ 8 ನೇ ಪ್ರತಿವಾದಿಯ ಹೆಂಡತಿ. ಉಮಾ, ಮಂಜ, ಮಹೇಶ ಎಂದರೆ ಅವರ ಮಕ್ಕಳು ಎಂದರೆ ಸರಿ. ದಿ:11/04/2005 ರಲ್ಲಿ ಬಿ.ಟಿ.ಮಂಜಶೆಟ್ಟಿ ಎನ್ನುವವರಿಗೆ ಮನೆ ಮತ್ತು ನಿವೇಶನವನ್ನು ಕ್ರಯ ಮಾಡಿದರು ಎಂದರೆ ಸುಳ್ಳು 8 ನೇ ಪ್ರತಿವಾದಿ ನನ್ನ ಸ್ವಂತ ತಮ್ಮ ಆದ ಕಾರಣ ಅವರ ಆಸ್ತಿಗಳನ್ನು ಬಿಟ್ಟು ಪ್ರತಿವಾದಿ 1 ರಿಂದ 7 ರವರ ಹಿಸ್ಸೆಗೆ ಹೋದ ಆಸ್ತಿಗಳನ್ನು ಮಾತ್ರ ದಾವೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ವಾಸವಿರುವ ಆಸ್ತಿಯ ಮನೆಯ ಪೂರ್ವಕ್ಕೆ- ತಿರುಗಾಡಲು ಬಿಟ್ಟಿರುವ ಖಾಲಿ ಜಾಗ, ಪಶ್ಚಿಮಕ್ಕೆ- ಅಪ್ಪಣ್ಣಿ ಹಿತ್ತಲು, ದಕ್ಷಿಣಕ್ಕೆ- ನಂಜಪ್ಪಶೆಟ್ಟಿ ಹಿಸ್ಸೆ ಮನೆ, ಉತ್ತರಕ್ಕೆ- ಗುಂಡಪ್ಪ ಶೆಟ್ಟಿ ಹಿಸ್ಸೆ ಮನೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾನು ಹಿಸ್ಸೆ ಕೇಳಿಲ್ಲ ಎಂದರೆ ನನಗೆ ಓದು-ಬರಹ ಬರುವುದಿಲ್ಲ. ನಮ್ಮ ತಂದೆ, ಹಿರಿಯ ಹೆಂಡತಿ ಮಕ್ಕಳು, 1976 ರಲ್ಲೇ ಹಿಸ್ಸೆ ಪಡೆದು ಪ್ರತ್ಯೇಕ ವಾಸವಿರುತ್ತಾರೆ, ನಾವು ನಮ್ಮ ತಂದೆಯೂ ಸಹ ಹಿಸ್ಸೆ ಪಡೆದು ಪ್ರತ್ಯೇಕವಾಗಿ ವಾಸವಿರುತ್ತೇವೆ ಎಂದರೆ ಸುಳ್ಳು. ಪ್ರತಿವಾದಿಯರು ಅವರವರ ಕುಟುಂಬದ ವ್ಯವಹಾರವನ್ನು ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಿಪಿ-2 ರಿಂದ 5 ರ ದಾಖಲಾತಿಗಳ ಪ್ರಕಾರ ಅವರು ಈ ಹಿಂದೆಯೇ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸುಳ್ಳು.

5. 1976 ರಲ್ಲೇ ವಿಭಾಗವಾಗಿರುವುದರಿಂದ ಈಗ ಒಟ್ಟು ಕುಟುಂಬ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಹಿಸ್ಸೆಯ ಜಾಗದಲ್ಲಿ ಸಾಲ ಪಡೆದು ಆರ್.ಸಿ.ಸಿ.ಮನೆ ಕಟ್ಟಿದ್ದು, ಅದರಲ್ಲಿ ಹಿಸ್ಸೆ ಪಡೆಯುವ ಸಲುವಾಗಿ ಸುಳ್ಳು ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಿಸ್ಸೆ ಹಕ್ಕು ಇಲ್ಲ, ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳನ್ನು ಬಿಟ್ಟು ಪ್ರತಿವಾದಿಯರಿಗೆ ಬಂದಿರುವ ಆಸ್ತಿಗಳ ಮೇಲೆ ದಾವೆ ಹಾಕಿರುವುದರಿಂದ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಗಿದಿದೆ

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

( ಶ್ರೀ.ಯೋಗೇಶ್ )
ಸಿವಿಲ್ ನ್ಯಾಯಾಧೀಶರು, ಅರಕಲಗೂಡು